ಬೆಂಗಳೂರು ವಿಶ್ವವಿದ್ಯಾಲಯ
ರಾಷ್ಟ್ರೀಯ ಸೇವಾ ಯೋಜನೆ
ಎನ್.ಎಸ್.ಎಸ್ ಭವನ, ಜ್ಞಾನಭಾರತಿಆವರಣ, ಬೆಂಗಳೂರು-5600 56.

ಡಾ.ಆರ್. ಶ್ರೀನಿವಾಸ
ಕಾರ್ಯಕ್ರಮ ಸಂಯೋಜನಾಧಿಕಾರಿ ಮತ್ತು
ಸಮನ್ವಯಾಧಿಕಾರಿ, ಯುತ್‌ರೆಡ್‌ಕ್ರಾಸ್, ಬೆಂ.ವಿ.

ಕಚೇರಿ ದೂರವಾಣಿ 080-23214685
ಮೊಬೈಲ್ - 9972302204

ಸಂಖ್ಯೆ : ಬೆಂವಿ/ರಾಸೇಯೋ/10178/2018-2019

ದಿನಾಂಕ : 09/04/2019

To,
The Principal,
M.N. Degree College,
Kammagondanahalli,
Bangalore -15

ಮಾನ್ಯರೆ,

ವಿಷಯ : ಎನ್.ಎಸ್.ಎಸ್.ಘಟಕವನ್ನು ಮಂಜೂರು ಮಾಡುವ ಕುರಿತು.

ಉಲ್ಲೇಖ :1.ತಮ್ಮ ಪ್ರಸ್ತಾವನೆ MNDC/2092/BU/2018-2019. ದಿನಾಂಕ.13/03/2019
2.ಸರ್ಕಾರದ ಆದೇಶ ಸಂಖ್ಯೆ : ಇಡಿ/11/ವಿವಿಧ/2015 ಬೆಂಗಳೂರು,ದಿ.4ಮೇ.2015

********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಭಾರತ ಸರ್ಕಾರವು ಎನ್.ಎಸ್.ಎಸ್. ಕಾರ್ಯಚಟುವಟಿಕೆಗಳ ವ್ಯಾಪ್ತಿಯನ್ನು ವಿಸ್ತರಿಸುವ ದೃಷ್ಟಿಯಿಂದ ಸ್ವಯಂ ಆರ್ಥಿಕ ನೆರವಿನ ಎನ್.ಎಸ್.ಎಸ್.ಘಟಕಗಳ ನಿಯಮಾವಳಿಯನ್ನು ರೂಪಿಸಿರುತ್ತದೆ.ಆದರಂತೆ ರಾಜ್ಯ ಸರ್ಕಾರ ಮೇಲ್ಕಂಡ ಉಲ್ಲೇಖ 02 ಅನ್ವಯ ಆದೇಶ ಮಾಡಿರುತ್ತದೆ. ಸದರಿ ಆದೇಶದಂತೆ ಪದವಿ ತರಗತಿ ಪ್ರವೇಶಾತಿ ಸಂದರ್ಭದಲ್ಲಿ ಎನ್.ಎಸ್.ಎಸ್.ಶುಲ್ಕವನ್ನು ಸಂಗ್ರಹಿಸಿ ಸ್ವಯಂ ಆರ್ಥಿಕ ನೆರವಿನ ಎನ್.ಎಸ್.ಎಸ್.ಘಟಕಗಳನ್ನು ಮುನ್ನಡೆಸಬಹುದಾಗಿದೆ. ಆದರಂತೆ ಈ ಕೆಳಕಂಡ ಷರತ್ತು ಮತ್ತು ನಿಭಂದನೆಗಳಿಗೆ ಒಳಪಟ್ಟು ತಮ್ಮ ಕಾಲೇಜಿಗೆ 2018-2019ನೇ ಸಾಲಿಗೆ ಅರ್ಧ(50 ಸ್ವಯಂ ಸೇವಕರು) ಸ್ವಯಂ ಆರ್ಥಿಕ ನೆರವಿನ ಎನ್.ಎಸ್.ಎಸ್.ಘಟಕವನ್ನು ಮಂಜೂರು ಮಾಡಲಾಗಿದೆ. ಈ ಘಟಕವು ಕೇವಲ ಹಣಕಾಸಿನ ನೆರವನ್ನು ಹೊರತುಪಡಿಸಿ ಇತರೆ ಎನ್.ಎಸ್.ಎಸ್.ನಿಯಮಾವಳಿಗೆ ಒಳಪಟ್ಟಿರುತ್ತದೆ.ಭಾರತ ಸರ್ಕಾರದ ನಿಯಮಾಳಿಯ ಪ್ರತಿ ಮತ್ತು ರಾಜ್ಯ ಸರ್ಕಾರದ ಆದೇಶದ ಪ್ರತಿಯನ್ನು ಈಗಾಗಲೇ ತಮಗೆ ನೀಡಲಾಗಿದೆ.

**ಷರತ್ತು ಮತ್ತು ನಿಬಂಧನೆಗಳು :-**

1. ರಾಷ್ಟ್ರೀಯ ಸೇವಾ ಯೋಜನೆಯ ಕೈಪಿಡಿ ಹಾಗೂ ರಾಜ್ಯ ಸರ್ಕಾರದ ಆದೇಶಗಳ ಹಿನ್ನಲೆಯಲ್ಲಿ ಅನುದಾನ ಪಡೆದ ಘಟಕಗಳು ಖರ್ಚು ಮಾಡುವ ಮಾದರಿಯಲ್ಲಿ ಈ ಕೆಳಕಂಡಂತೆ ಖರ್ಚು ವೆಚ್ಚವನ್ನು ನಿರ್ವಹಿಸುವುದು.

| ಕ್ರ.ಸಂ. | ವಿವರ | ಶೇಕಡವಾರು | ಮೊತ್ತ |
|---|---|---|---|
| 1. | ಊಟ ಉಪಚಾರ | 61% | 6,250-00 |
| 2. | ಸಾಗಾಟ ವೆಚ್ಚ /ಸಾರಿಗೆ ವೆಚ್ಚ | 7% | 800-00 |
| 3. | ಸಣ್ಣ ವಸ್ತುಗಳ ಖರೀದಿ | 5% | 500-00 |
| 4. | ಸಿಬ್ಬಂದಿ ಭತ್ಯೆ | 2% | 200-00 |
| 5. | ಇತರೆ ಖರ್ಚುಗಳು | 2% | 250-00 |
| 6. | ಎನ್.ಎಸ್.ಎಸ್.ಕಾರ್ಯಕ್ರಮಾಧಿಕಾರಿಯ ಭತ್ಯೆ(ವರ್ಷಕ್ಕೆ ಗರಿಷ್ಠ 4800/-ರೂಪಾಯಿಗಳಿಗೆ ಸೀಮಿತವಾಗಿ) | 23% | 2,400-00 |
| | **ದೈನಂದಿನ ಚಟುವಟಿಕೆಗಳ ವಾರ್ಷಿಕ ಒಟ್ಟು ಮೊತ್ತ** | | 10,400-00 |
| | **7 ದಿನಗಳ ವಾರ್ಷಿಕ ವಿಶೇಷ ಶಿಬಿರದ ಮೊತ್ತ** | | 32,500-00 |

...............2

Scanned by CamScanner

2. ನೂರು ವಿದ್ಯಾರ್ಥಿಗಳಿರುವ ಅರ್ಧ ಘಟಕ ಸ್ಥಾಪಿಸಿದ್ದಲ್ಲಿ ಗರಿಷ್ಠ 8000/-ರೂಪಾಯಿಗಳನ್ನು ದೈನಂದಿನ ಶಿಬಿರಕ್ಕೆ
3. 22.500/-ಗಳನ್ನು ವಿಶೇಷ ಶಿಬಿರಕ್ಕೆ ಖರ್ಚು ಮಾಡಬಹುದಾಗಿದೆ.ವಾರ್ಷಿಕ ಶಿಬಿರಕ್ಕೆ ವಿಶ್ವವಿದ್ಯಾನಿಲಯದ
ಎನ್.ಎಸ್.ಎಸ್.ಅನುದಾನವನ್ನು ಖರ್ಚು ವೆಚ್ಚವನ್ನು ನಿರ್ವಹಿಸಬೇಕು.
4. ಕ್ರಮಸಂಖ್ಯೆ 1 ರಂತೆ ಖರ್ಚು ಮಾಡಿ ಉಳಿದ ಹಣವನ್ನು ಕಾಲೇಜಿನ ಎಲ್ಲಾ ಘಟಕಗಳ ವಿಶೇಷ ಕಾರ್ಯಕ್ರಮಗಳಿಗೆ
ಬಳಸಬಹುದಾಗಿದೆ.
5. ಈಗಾಗಲೇ ಕಾಲೇಜಿನಲ್ಲಿ (ಒಂದನೇ ಘಟಕ) ಅನುದಾನದ ಒಂದು ಘಟಕವಿದ್ದು ಇನ್ನೊಂದು ಘಟಕವನ್ನು (ಎರಡನೇ
ಘಟಕ) ಸ್ಥಾಪನೆ ಮಾಡಬೇಕಾದರೆ ಪ್ರತಿ ವಿದ್ಯಾರ್ಥಿಯಿಂದ ರೂ.40/-ರಂತೆ ಎನ್.ಎಸ್.ಎಸ್. ಶುಲ್ಕ ಸಂಗ್ರಹಿಸಿ ಸದರಿ
ಮೊತ್ತದಲ್ಲಿ  ಈ ಎನ್.ಎಸ್.ಎಸ್. ಘಟಕ ಮುನ್ನಡೆಸುವುದು.
6. ತಮ್ಮ ಕಾಲೇಜಿನಲ್ಲಿ ಎನ್.ಎಸ್.ಎಸ್. ಘಟಕ ಇಲ್ಲದಿದ್ದಲ್ಲಿ ಅಂತಹ ಕಾಲೇಜು ಪ್ರತಿ ವಿದ್ಯಾರ್ಥಿಯಿಂದ ರೂ.50/ರಂತೆ
ಎನ್.ಎಸ್.ಎಸ್.ಶುಲ್ಕವನ್ನು ಸಂಗ್ರಹಿಸಿ ಸದರಿ ಮೊತ್ತದಲ್ಲಿ ಈ ಎನ್.ಎಸ್.ಎಸ್. ಘಟಕ ಮುನ್ನಡೆಸುವುದು.
7. ಎನ್.ಎಸ್.ಎಸ್. ಶುಲ್ಕವನ್ನು ಸಂಗ್ರಹಿಸಿದ ಮೊತ್ತವನ್ನು ಪ್ರಾಂಶುಪಾಲರು/ಎನ್.ಎಸ್.ಎಸ್. ಅಧಿಕಾರಿಯ ಹೆಸರಲ್ಲಿ ಪ್ರತ್ಯೇಕ
ಖಾತೆಯನ್ನು ತೆರೆದು ಅದರಲ್ಲಿ ನಿರ್ವಹಿಸಬೇಕು.
8. ಎನ್.ಎಸ್.ಎಸ್.ಕಾರ್ಯಕ್ರಮಾಧಿಕಾರಿಗಳನ್ನು ಕಡ್ಡಾಯವಾಗಿ ಎನ್.ಎಸ್.ಎಸ್. ತರಭೇತಿಗೆ ನಿಯೋಜಿಸುವುದು.
9. ಎನ್.ಎಸ್.ಎಸ್.ಕಾರ್ಯಕ್ರಮಾಧಿಕಾರಿಗಳನ್ನು ವಿಶ್ವವಿದ್ಯಾಲಯದ ಯಾವುದೇ ನಿಯೋಜನೆ ಮೇಲೆ ಕೋರಿದ್ದಲ್ಲಿ
ನಿಯೋಜಿಸುವುದು.
10. 7 ದಿನಗಳ ಎನ್.ಎಸ್.ಎಸ್. ವಿಶೇಷ ಶಿಬಿರವನ್ನು ಪ್ರತೀ ವರ್ಷ ಕಡ್ಡಾಯವಾಗಿ ಆಯೋಜಿಸುವುದು.
11. ಎನ್.ಎಸ್.ಎಸ್.ಸ್ವಯಂಸೇವಕರನ್ನು ವಿಶ್ವವಿದ್ಯಾಲಯ/ರಾಜ್ಯ/ರಾಷ್ಟ್ರ ಮಟ್ಟದ ಕಾರ್ಯಕ್ರಮಗಳಿಗೆ ಕಳುಹಿಸುವುದು.
12. ಕಾಲಕಾಲಕ್ಕೆ ವಿಶ್ವವಿದ್ಯಾಲಯ / ಸರ್ಕಾರ ಸೂಚಿಸುವ ನಿಬಂಧನೆಗಳಿಗೆ ಒಳಪಟ್ಟಿರುತ್ತದೆ.
13. ಒಂದು ವೇಳೆ ಎನ್.ಎಸ್.ಎಸ್.ಕಾರ್ಯಚಟುವಟಿಕೆಗಳು ಸಮರ್ಪಕವಾದ ರೀತಿಯಲ್ಲಿ ನಡೆಯುತ್ತಿಲ್ಲ ಎಂದು ತಿಳಿದು
ಬಂದಲ್ಲಿ ಎನ್.ಎಸ್.ಎಸ್.ಘಟಕವನ್ನು ಪರಾಮರ್ಶಿಸಿ ರದ್ದುಗೊಳಿಸಲಾಗುವುದು.
14. ತಮ್ಮ ಕಾಲೇಜಿನಲ್ಲಿ ಎನ್.ಎಸ್.ಎಸ್.ಘಟಕವನ್ನು ಸ್ಥಾಪಿಸಿದ ನಂತರ ಪ್ರತೀ ವರ್ಷ ಈ ಕೆಳಕಂಡ ದಾಖಲೆಗಳನ್ನು
**ಎನ್.ಎಸ್.ಎಸ್. ಕಛೇರಿಗೆ ಕಡ್ಡಾಯವಾಗಿ ತಲುಪಿಸುವುದು.**
    1. ಎನ್.ಎಸ್.ಎಸ್. ಕಾರ್ಯಚಟುವಟಿಕೆಗಳ ಪ್ರಾರಂಭಕ್ಕೆ ಮುಂಚಿತವಾಗಿ (1) ಎನ್.ಎಸ್.ಎಸ್. ಸ್ವಯಂ ಸೇವಕರ ನೊಂದಣಿ ಪಟ್ಟಿ(2)ಕಾಲೇಜಿನ ವಿವರ/ಮಾಹಿತಿ(3)ಎನ್.ಎಸ್.ಎಸ್. ಕಾರ್ಯಕ್ರಮಗಳ ವಾರ್ಷಿಕ ಕ್ರಿಯಾ ಯೋಜನೆ ಪಟ್ಟಿ(4) ಎನ್.ಎಸ್.ಎಸ್. ಸಲಹಾ ಸಮಿತಿ ಸಭೆಯ ವಿವರ.
    2. 7 ದಿನಗಳ ವಾರ್ಷಿಕ ವಿಶೇಷ ಶಿಬಿರವನ್ನು ಆಯೋಜಿಸುವ 20 ದಿನಗಳು ಮೊದಲು ಪ್ರಸ್ತಾವನೆ,ಶಿಬಿರ ಆಯೋಜನೆಯ ಒಂದು ವಾರ ಮುಂಚಿತವಾಗಿ ಆಹ್ವಾನ ಪತ್ರಿಕೆ ,ಶಿಬಿರ ಮುಕ್ತಾಯವಾದ 15 ದಿನದ ಒಳಗಾಗಿ ವರದಿ,ಛಾಯಚಿತ್ರ ಮತ್ತು ಇತರೆ ದಾಖಲೆಗಳನ್ನು ಸಲ್ಲಿಸಿವುದು.
    3. ಮಾರ್ಚ್ ತಿಂಗಳ ಒಳಗಾಗಿ ವಾರ್ಷಿಕ ವರದಿ ಮತ್ತು ಇತರೆ ದಾಖಲೆಗಳನ್ನು ಸಲ್ಲಿಸುವುದು.

15. ಒಂದು ವೆಳೆ ಎನ್.ಎಸ್.ಎಸ್.ಗೆ ಸಂಬಂದಿಸಿದ ದಾಖಲಾತಿಗಳು, ವರದಿ ಮತ್ತು ಇತರೇ ಮಾಹಿತಿಗಳನ್ನು ಕಾಲಕಾಲಕ್ಕೆ ಸಲ್ಲಿಸದಿದ್ದಲ್ಲಿ ಅದರ ಮುಂದಿನ ವರ್ಷ ಎನ್.ಎಸ್.ಎಸ್.ಘಟಕವನ್ನು ರದ್ದುಗೊಳಿಸಲಾಗುವುದು.

ಕಾರ್ಯಕ್ರಮ ಸಂಯೋಜನಾಧಿಕಾರಿಗಳು.

Programme Co ordinator
NSS, Bangalore University
Bangalore-560056

Scanned by CamScanner